ವಸುಂಧರಾ ಸತ್ಯ, ದೊಡ್ಡಬಳ್ಳಾಪುರ
ಮನೆಯಲ್ಲಿ ಮೂರ್‍ನಾಲ್ಕು ದೋಸೆ ತಿನ್ನುವ ನಮ್ಮವರು ಹೊಟೇಲ್‌ಗಳಲ್ಲಿ ಒಂದೇ ದೋಸೆ ಸಾಕೆನ್ನುವರಲ್ಲ?



ಓಹ್! ಅದೇಕೆ ಮನೆಯಲ್ಲಿ ಅಷ್ಟು ಚಿಕ್ಕದಾದ ದೋಸೆಗಳನ್ನು ಹೊಯ್ಯುವಿರಿ?

ವಿಜಯ್ ಹೆಮ್ಮಿಗೆ, ಮೈಸೂರು
'ಪತಿ ದೇವರು' ಎನ್ನುತ್ತಾರೆ. 'ಪತ್ನಿ ದೇವತೆ' ಎಂದೇಕೆ ಹೇಳುವುದಿಲ್ಲ ರಾಂ?
ಏಕೆಂದರೆ ಕಲ್ಲಿನಂತೆ ಕುಳಿತವನು ದೇವರು. ಅಷ್ಟೋತ್ತರ ಮಾಡುವವಳು ದೇವಿಯಲ್ಲ, ಅರ್ಚಕಿ.

ಜೀವಿ, ಗೊಂಡೇದಹಳ್ಳಿ
ತಾಳಿದವನು ಬಾಳಿಯಾನು. ತಾಳಿದವಳು?
ತಾಳುವಂತಹ ಪತಿಯನ್ನು ಪಡೆದಾಳು.

ವಿ. ಹೇಮಂತಕುಮಾರ್, ಬೆಂಗಳೂರು
ಡಾಕ್ಟರ್‌ಗೆ ಡಾಕ್ಟರೇಟ್ ಬಂದರೆ ಏನೆಂದು ಕರೆಯಬೇಕು?



ಅವರಿಗೆ ಒಳ್ಳೆಯ ರೇಟ್ ಬಂದಿದೆ ಎಂದು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ದೇವರಿಗೆ ವಾರದ ರಜೆ ಕೊಡುವುದಕ್ಕೆ ಯಾರ ಅನುಮತಿ ಪಡೆಯಬೇಕು?
ಚೀನಾದ್ದು. ಅದು ಮನಸ್ಸು ಮಾಡಿದರೆ ವೈರಸ್ ಹರಡಿ ವರ್ಷದ ರಜೆ ಕೊಟ್ಟೀತು.

ನಾಗೇಂದ್ರ ಗಂಗೊಳ್ಳಿ, ಬೆಂಗಳೂರು
ಏನಾದರೂ ಸಹಾಯ ಕೇಳುವಾಗ ತಲೆ ಕೆರೆದುಕೊಳ್ಳುವುದು ಏಕೆ?
ಸರಿಯಾದ ಪದಗಳನ್ನು ಮೆದುಳಿನಿಂದ ಹೆಕ್ಕಿ ತೆಗೆಯಲಂತೆ.

ಟಿ.ಎಚ್.ಎಂ. ಶೇಖರಯ್ಯ, ಗೆದ್ದಲಗಟ್ಟೆ
ಬಡವ–ಶ್ರೀಮಂತ ಎಂಬ ಅಂತರ ಹೋಗಿ 'ಸಮಾನಿತ' ಎಂಬುದು ಯಾವಾಗ ಆಗಬಹುದು?
ಷೇರ್ ಮಾರ್ಕೆಟ್ ಎಗ್ಗಾಮಗ್ಗಾ ಕುಸಿದಾಗ.

ಪಿ. ಜಯವಂತ ಪೈ, ಕುಂದಾಪುರ
ಅಂದು ಮಕ್ಕಳಿರಲವ್ವ ಮನೆ ತುಂಬ ಎನ್ನುತ್ತಿದ್ದರು. ಇಂದು?
ಮಕ್ಕಳಿರಲವ್ವ ಪ್ಲೇ ಹೋಂ ತುಂಬ!

ರಾಜೇಂದ್ರ ಹೆಗಡೆ, ಹಾವೇರಿ
ನನ್ನ ಪ್ರಶ್ನೆಗೆ ಬಹುಮಾನ ಖಚಿತವೆಂದು ನಾಲ್ಕು ದಶಕಗಳಿಂದ ಕಾಯುತ್ತಿರುವೆ. ಯಾವಾಗ ಖಚಿತ?
ಇನ್ನು ಹೆಚ್ಚು ತಡವಾಗದು. ಕೂಡಲೆ ಅಂತಹದ್ದೊಂದು ಪ್ರಶ್ನೆ ಕಳುಹಿಸಿ.

ಅ. ಮೃತ್ಯುಂಜಯ, ಪಾಂಡವಪುರ
ನಮ್ಮ ಜನಗಳಿಗೆ ಸರಳ ಜೀವನ ಎಂದರೆ ಗೊತ್ತಿಲ್ಲ. ಏಕೆ ರಾಮ್?
ಗೊತ್ತಿದೆಯಲ್ಲ. ಎಷ್ಟೋ ಜನರ ಜೀವನ ಸರಳ ಹಿಂದೆಯೇ!

ಬಿ.ಆರ್. ಉಷಾ, ಕೆನಡಾ
ಪಾಯಸಕ್ಕೂ, ಪಾಸ್ತಾಕ್ಕೂ ಇರುವ ವ್ಯತ್ಯಾಸವೇನು?
ಬಟ್ಟಲಲ್ಲಿ ಕಣ್ಣುಗಳು/ಕಡ್ಡಿಗಳು ಕಂಡರೆ ಪಾಯಸ; ಪೈಪು, ವಾಶರ್ ಕಂಡರೆ ಪಾಸ್ತಾ.

ಮಲ್ಲಿಕಾರ್ಜುನ, ಸುರಧೇನುಪುರ
ಗ್ರಾಹಕರೇ ದೇವರು ಅಂತಾದರೆ ಗ್ರಹಗಳು?
ಅತಿ ಚೌಕಾಸಿಗರು.

ಎ. ಹರೀಶ ಡೋಂಗ್ರೆ, ಬೆಂಗಳೂರು
ಕೆಲವರು ಅಜ್ಜ ತೀರಿಕೊಂಡ ಸುದ್ದಿಯನ್ನು ಫೇಸ್ಬುಕ್ಕಲ್ಲಿ ಹಾಕಿದಾಗಲೂ ಲೈಕ್ ಕೊಡುತ್ತಾರಲ್ಲ?
ಅವರು ಯಾರದೇ ತಿಥಿ, ವೈಕುಂಠಗಳನ್ನು ಇಷ್ಟ ಪಡುವವರಂತೆ!

ಎಂ.ಜಿ. ಉಮಾ, ಬಳ್ಳಾರಿ
ಶಾಲೆಗೆ ಸೇರಬೇಕಾದರೆ ಅಆಇಈ ಬರಬೇಕು. ರಾಜಕೀಯಕ್ಕೆ ಸೇರಬೇಕಾದರೆ?
ತತ್ತಾ, ತಿಥಿ, ಥೂಥೂ, ಜೀಜೀ ಬರಬೇಕು.

## ಬಹುಮಾನಿತ ಪ್ರಶ್ನೆ

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೆಗಾಲ
'ಇಲ್ಲಿ ಸಲ್ಲದವರು' 'ಇನ್ನೆಲ್ಲಿ ಸಲ್ಲುತ್ತಾರೆ' ಗುರುಗಳೇ?
ಪಾರ್ಲಿಮೆಂಟಿನಲ್ಲಿ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಅರಮನೆ ಇದ್ದರೂ ನೆರೆಮನೆ ಇರಬೇಕಂತೆ. ಇದರ ಅರ್ಥ ತಿಳಿಸಿ?
'ನಿಮ್ಮ ಮನೇಲೂ ಕರೆಂಟ್ ಹೋಗಿದೆಯಾ?' ಎಂದು ಕೇಳಲಾದರೂ ಒಂದು ನೆರೆ ಬೇಕಲ್ಲ.

ಸುಧೀಂದ್ರ, ಬೆಂಗಳೂರು
ಸಿನಿಮಾದಲ್ಲಿ ನಾಯಕನು 'ಒಂದ್ಮಾತ್ಹೇಳ್ತೀನ್ಕೇಳು' ಎಂದು ಆರಂಭಿಸಿ ಪುಟಗಟ್ಟಲೆ ಡೈಲಾಗ್ ಹೊಡೆಯುವನಲ್ಲ?
ಎರಡ್ಮಾತೂಂದ್ರೆ ಒಂದು ಭಾಷಣದ ಲೆಕ್ಕದಲ್ಲಿ ಒಂದ್ಮಾತು ಅಷ್ಟುದ್ದ ಡೈಲಾಗಿಗೆ ಸಮವಂತೆ.

ಬಿ. ಚಂದ್ರೇಗೌಡ, ಬೆಂಗಳೂರು
ಗಣಿತಕ್ಕೂ, ಹೆಂಡತಿಗೂ ಏನು ವ್ಯತ್ಯಾಸ?



ಗಣಿತವನ್ನು ಗೈಡ್ ಮೂಲಕ ಅರಿಯಬಹುದು. ಹೆಂಡತಿ ಚಿರಪ್ರಶ್ನೆ.

ಬಿಂದುಶ್ರೀ ಪೆಮ್ಮಳ್ಳಿ, ಎಸ್.ಎಸ್.ಗುಂಡ್ಲು
'ಸುಧಾ' ಅಂದ್ರೆ ನಮ್ಮಪ್ಪನಿಗೆ ಇಷ್ಟ. ನಿಮ್ಮ ಅಭಿಪ್ರಾಯವೇನು?
'ಸುಧಾ' ಇಷ್ಟ ಪಡುವವರೆಲ್ಲರೂ ನನಗೆ ಇಷ್ಟ.

ಅಮರಯ್ಯಾ ಪತ್ರಿಮಠ, ಸುರಪುರ
ರಾಜಕಾರಣಿಗಳನ್ನು ತಪಸ್ಸು ಮಾಡಲು ಅರಣ್ಯಕ್ಕೆ ಕಳುಹಿಸಿದರೆ ಹೇಗೆ?
ಈಗಾಗಲೇ ಸಾಕಷ್ಟು ಅಳಿದು ಉಳಿದಿರುವ ಒಂದಿಷ್ಟು ಅರಣ್ಯವೂ ಮಾಯವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

■ ರಾಮ್